





ನಿಂಗಪ್ಪ ಮುದೇನೂರು
ಕಲೆ: ಸಂತೋಷ್ ಸಸಿಹಿತ್ಲು

# ಹೂವಷ್ಟೇ ಅಲ್ಲ ಎಲೆಯೂ ಅರಳುತ್ತದೆ

ಅರಳುವುದು
ಹೂವಿನ ಕಾಯಕವಷ್ಟೇ ಅಲ್ಲ
ಎಲೆಯೂ ಅರಳುತ್ತದೆ

ಮೈಯ ಚಾಚುತ್ತ, ಮನವ ಬಿಚ್ಚುತ್ತಾ
ಆಕಾಶದೆತ್ತರವ ತೂಗಲು
ತಾನೂ ತವಕಿಸುತ್ತದೆ

ಒಂದು ಬಳ್ಳಿ ಗೋಡೆಯ ತಬ್ಬಿ
ಬೇರು ಬಿಟ್ಟು ಭದ್ರವಾಗುತ್ತಾ
ನೆಲದ ಜಲ ಬಿಂದುವಿನಲ್ಲಿ ದೇಹ ತಂಪಾಗಿಸುತ್ತಾ
ಬಾಳ ಸ್ರವಿಸುವುದು
ಆದರ ಹೆತ್ತಮ್ಮನಿಗೂ ಗೊತ್ತು

ಕಾಂಡವಾಗುವುದಕ್ಕೆ ದೀರ್ಘ ಋತುಮಾನಗಳು
ಬೇಕಿಲ್ಲ ಸೂರ್ಯ ಚಂದ್ರರ ಪ್ರೀತಿ
ಗಾಳಿ ಬೆಳಕಿನ ಸ್ಪರ್ಶ ಇದ್ದರೆ ಸಾಕು
ಪ್ರೀತಿಯಿಂದಲೇ ಋತುಮತಿಯಾಗಬಲ್ಲದು
ಹೆಣ್ಣಿನಂತೆ
ವಧು ಹುಣ್ಣಿಮೆಯಂತೆ

ನವಮಾಸವ ಹೊತ್ತ ತಾಯಿಯಂತೆ
ಹಸಿರು ಸೀರೆ, ಕುಪ್ಪಸವುಟ್ಟು
ಹೂ ಮುಡಿದು ನಿಲ್ಲಲೂಬಲ್ಲದು ತನ್ನಿಳೆಯ
ಚೆಲುವಿಕೆಯಲ್ಲಿ

ಎಲೆಯ ಮೇಲೆ ಒಂದು ಅನ್ನದ ಅಗಳು ಕಂಡರೆ
ದನಿಗೂಡಿಸಬಲ್ಲದು ಹಕ್ಕಿ
ಅಕ್ಕನ ಭಾವಾಭಿವ್ಯಕ್ತಿ

ಚಿಟ್ಟೆ.,
ಎಲೆ, ಹೂವ ಮೇಲೆ ಕುಳಿತು ಮೌನವಾಗಿ
ಹಾಡೂ ಬರೆಯಬಲ್ಲದು
ಕವಿಯ ಭಾವದಂತೆ
ಸಂತನ ದಿವ್ಯ ಧ್ಯಾನದಂತೆ

